

# ಅಚ್ಚರಿಯ ಆಲ್ಪಾಕ!



ಅಮೆರಿಕ ದೇಶದ ಮೆಸಾಚುಸೆಟ್ಸ್ ರಾಜಧಾನಿ ಬೋಸ್ಟನ್‌ನಿಂದ ಸುಮಾರು 130 ಕಿ.ಮೀ ದೂರದಲ್ಲಿರುವ ಮಾರ್ಥಾಸ್ ವಿನಿಯಾರ್ಡ್ ದ್ವೀಪ ಅನೇಕ ವಿಶೇಷತೆಗಳನ್ನು ತನ್ನದಾಗಿಸಿಕೊಂಡಿದೆ. ಕುರಿಯಂತೆ ಮೈತುಂಬಾ ದಟ್ಟವಾಗಿ ಉಣ್ಣೆಯನ್ನು ಹೊಂದಿರುವ, ಒಂಟೆಯಂತೆ ನೀಳವಾದ ಕತ್ತನ್ನು ಹೊಂದಿದ್ದು, ಡುಬ್ಬವಿಲ್ಲದ 'ಆಲ್ಪಾಕ' ಎಂದು ಕರೆಯಲ್ಪಡುವ ವಿಚಿತ್ರ ಪ್ರಾಣಿಗಳನ್ನು ನಾವಿಲ್ಲಿ ನೋಡಬಹುದು.

19 ಎಕರೆ ಪ್ರದೇಶದಲ್ಲಿರುವ 'ಐಲ್ಯಾಂಡ್ ಆಲ್ಪಾಕ' ಎಂಬ ಫಾರ್ಮ್‌ನಲ್ಲಿ ಆಲ್ಪಾಕಗಳನ್ನು ಬೆಳೆಸಲಾಗುತ್ತಿದ್ದು ಈ ಪ್ರಾಣಿಗಳನ್ನು ನೋಡುವುದೇ ಸಂತಸದ ಸಂಗತಿ. ಮಾರ್ಥಾಸ್ ವಿನಿಯಾರ್ಡ್‌ಗೆ ಬರುವ ಪ್ರವಾಸಿಗರು ತಪ್ಪದೇ 'ಐಲ್ಯಾಂಡ್ ಆಲ್ಪಾಕ' ಫಾರ್ಮ್‌ಗೆ ಭೇಟಿ ನೀಡಿ ಈ ವಿಶಿಷ್ಟ ಪ್ರಾಣಿಗಳ ರೂಪವನ್ನು ಕಂಡು ಅಚ್ಚರಿ ವ್ಯಕ್ತಪಡಿಸುತ್ತಾರೆ.

ನೋಡಲು ಕುರಿ ಹಾಗೂ ಒಂಟೆಯ ಮಿಶ್ರ ತಳಿಯಂತೆ ಕಾಣುವ ಆಲ್ಪಾಕಾ ಪ್ರಾಣಿಯನ್ನು ಒಂದು ಕಾಲದಲ್ಲಿ 'ಇಂಕಾ' ಸಾಮ್ರಾಜ್ಯದ ಸಂಸ್ಕೃತಿಯ ಭಾಗವಾಗಿ ರಾಜಮನೆತನದವರು ಸಾಕುತ್ತಿದ್ದರಂತೆ. ಒಂಟೆ ವಂಶಕ್ಕೆ ಸೇರಿದ ಆಲ್ಪಾಕಗಳಿಗೆ ಕೊಂಬು, ಗೊರಸುಗಳು ಇಲ್ಲದಿರುವುದರಿಂದ ನಿರ್ಭೀತಿಯಿಂದ ಸಾಕಬಹುದಾಗಿದೆ. ಹುಲ್ಲು ಹಾಗೂ ಕಾಳುಗಳು ಇವುಗಳ ಮುಖ್ಯ ಆಹಾರ. ಕುರಿಗಳ ಉಣ್ಣೆಗಿಂತಲೂ ಹೆಚ್ಚು ಹೊಳಪುಳ್ಳ ಹಾಗೂ ಅತೀ ಹಗುರವಾದ ಉಣ್ಣೆ ಬೆಂಕಿ ಮತ್ತು ನೀರು ನಿರೋಧಕ ಹಾಗೂ ತಂಪಾದ ವಾತಾವರಣದಲ್ಲಿ ಹೆಚ್ಚು ಉಷ್ಣತೆಯನ್ನು ನೀಡುವ ಗುಣಗಳಿಂದಾಗಿ ಟೋಪಿ, ಜಾಕೆಟ್, ಸ್ವೆಟರ್ ಹಾಗೂ ಮಹಿಳೆಯರ ಉಡುಪುಗಳನ್ನು ತಯಾರಿಸಲು ಆಲ್ಪಾಕ ಉಣ್ಣೆಯನ್ನು ಉಪಯೋಗಿಸುತ್ತಾರೆ. ಇವುಗಳ ಹಾಲು ಕುಡಿಯಲು ಯೋಗ್ಯವಾಗಿದ್ದು, ಮಾಂಸವನ್ನು ಇತರೆ ಪ್ರಾಣಿಗಳ ಮಾಂಸಗಳಂತೆ ತಿನ್ನಲು ಉಪಯೋಗಿಸಬಹುದಂತೆ. ಇವುಗಳ ಹಿಕ್ಕೆಯನ್ನು ಗೊಬ್ಬರವನ್ನಾಗಿ ಉಪಯೋಗಿಸುತ್ತಾರಂತೆ.

ಪ್ರಪ್ರಥಮವಾಗಿ 1984ರಲ್ಲಿ, ಪೆರು, ಬೊಲುವಿಯಾ ಹಾಗೂ ಚಿಲಿ ದೇಶಗಳಿಂದ 'ಆಲ್ಪಾಕ'ಗಳನ್ನು ಅಮೆರಿಕ ದೇಶಕ್ಕೆ ಆಮದು ಮಾಡಿಕೊಂಡು ಸಾಕಲು ಪ್ರಾರಂಭಿಸಿದರಂತೆ. ನಂತರದ ದಿನಗಳಲ್ಲಿ ಹಲವು ದೇಶಗಳಲ್ಲಿಯೂ ಸಹ ಆಲ್ಪಕಾ ಪ್ರಾಣಿಯನ್ನು ಸಾಕಲು ಪ್ರಾರಂಭಿಸಿದರಂತೆ. ಆಲ್ಪಾಕಗಳನ್ನು ಕಂಡರೆ ನರಿಗಳು ಹೆದರಿ ಓಡಿಹೋಗುತ್ತವಂತೆ. ಆದುದರಿಂದ ಆಲ್ಪಾಕಗಳನ್ನು ಕುರಿಗಳನ್ನು ಕಾಯಲು ಕೆಲವು ದೇಶಗಳಲ್ಲಿ ಬಳಸುತ್ತಾರಂತೆ.

■ ಜಿ. ನಾಗೇಂದ್ರ ಕಾವೂರು